ಕವನ ಸಂಕಲನಗಳಿಂದ ತಮ್ಮ ಚಿತ್ರದ ಸನ್ನಿವೇಶಗಳಿಗೆ ಅಳವಡಿಕೆಯಾಗಬಲ್ಲ ಪ್ರಕಟಿತ ಕವಿತೆಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಸಂಗೀತ ನಿರ್ದೇಶಕರಿಂದ ಸ್ವರ ಪ್ರಸ್ತಾರ ಸಂಯೋಜಿಸಿ ಆನಂತರ ಧ್ವನಿ ಮುದ್ರಣ, ಚಿತ್ರೀಕರಣ, ಸಂಕಲನಗಳಲ್ಲಿ ವ್ಯವಸ್ಥಿತವಾಗಿ ಉತ್ತಮ ಸಾಹಿತ್ಯವನ್ನು ತಮ್ಮ ಸದಭಿರುಚಿಯಿಂದ, ಸಂಸ್ಕಾರದಿಂದ ಕನ್ನಡಾಭಿಮಾನದಿಂದ ಅಳವಡಿಸಿ ಜನಮಾನಸದಿಂದ ಸೈ ಎನಿಸಿಕೊಳ್ಳುವುದು ಇವೆಲ್ಲವೂ 'ಕವಿ ಗೀತೆ'ಗಳ ವಿಭಾಗಕ್ಕೆ ಸೇರುತ್ತವೆ.

ಇನ್ನು ಕೆಲವು ಅಪೂರ್ವ ಸನ್ನಿವೇಶಗಳಿಗಾಗಿ ಕವಿಗಳಿಂದ (ಸಿನಿಮಾ ಗೀತರಚನಕಾರರಿಂದ) ಹೊಸ ಪದ್ಯಗಳನ್ನು (ಹಾಡುಗಳನ್ನು) ಬರೆಯಿಸಿ, ಸಂಗೀತ ಸಂಯೋಜಿಸಿ ಚಿತ್ರಕ್ಕೆ ಅಳವಡಿಸುವುದು... ಇಂಥ ಕಡೆ ಸಾಹಿತ್ಯದ ಸೃಜನಶೀಲತೆಯ ಗುಣಮಟ್ಟ ಒಂದೇ ಬಗೆಯಲ್ಲಿ ಇರುವುದಿಲ್ಲ! ಇರಲಾಗದು! (ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಉತ್ಕೃಷ್ಟ ಕಾವ್ಯ ಮೂಡಿಬರಬಹುದು. ಹಾಗೆ ಮೂಡಿ ಬಂದಿದ್ದರೆ ಅದು ಬರೆದು ಕೊಟ್ಟವರ ಪುಣ್ಯ. ಸಂಗೀತ ನಿರ್ದೇಶಕರು ಮ್ಯೂಸಿಕ್ ಮಾಡಿದ ಪುಣ್ಯ. ಸಾಹಿತ್ಯಕ ಹಾಡು ದೊರೆತು ಹಾಡಿದ ಗಾಯಕ ಗಾಯಕಿಯರ ಪುಣ್ಯ!)

ಸಿನಿಮಾ ಗೀತೆಗಳು ಕಾವ್ಯ ಹೌದೇ, ಅಲ್ಲವೇ ಎಂಬ ಚರ್ಚೆ ರಸಿಕರಲ್ಲಿ ಆಗೀಗ ನಡೆದೇ ಇರುತ್ತದೆ. ಸ್ವರಮಾಲಿಕೆಯ ದೇಹಕ್ಕೆ ತಕ್ಕಂತೆ ಹೊಲೆದ ಗೀತೆಯ ಅಂಗಿಗಳು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತವೆ, ಅವುಗಳ ಸ್ಥಾನ ಏನು ಎಂಬುದರ ಕುರಿತಂತೆ ತಮ್ಮ ಅನುಭವ ಮತ್ತು ಕಾವ್ಯಕರ್ಮದ ಹಿನ್ನೆಲೆಯಲ್ಲಿ ಇಬ್ಬರು ಗೀತರಚನಕಾರರು ಇಲ್ಲಿ ಬರೆದಿದ್ದಾರೆ.

ಒಳ್ಳೆಯ ಚಿತ್ರಗಳಲ್ಲಿ ಕೆಟ್ಟ (ಹದತಪ್ಪಿದ ಎಂಬರ್ಥದಲ್ಲಿ) ಹಾಡುಗಳಿರಬಹುದು, ಕೆಟ್ಟ ಚಿತ್ರಗಳಲ್ಲಿ ಆಕಸ್ಮಿಕವಾಗಿ ಒಳ್ಳೆಯ ಹಾಡುಗಳೂ ಇರಬಹುದು. ಅದು ನಿರ್ಮಾಪಕನ, ಕೇಳುಗನ ಅದೃಷ್ಟ.

'ಕಾವ್ಯ'ದ ಅಳತೆಗೋಲು ಬೇರೆ, ಹಾಡಿನ ಮಾನದಂಡಗಳು ಬೇರೆ. ಗದ್ಯಾತ್ಮಕ ಸಾಲುಗಳಿಗೆ ಸುಮಧುರ ಸಂಗೀತ ಅಳವಡಿಸಿ ಸೂಪರ್‌ಹಿಟ್ ಹಾಡುಗಳನ್ನಾಗಿ ಮಾಡಿದ ಸಂದರ್ಭಗಳಿವೆ, ಅತ್ಯುತ್ತಮ ಸಾಹಿತ್ಯ ಇದ್ದೂ ಜನರ ಕಿವಿಗೆ ಹಿಡಿಸದ ('ಕ್ಯಾಚಿ' ಅಲ್ಲದ) ಹಾಡುಗಳೂ ಬಂದಿವೆ.

ಹಾಡಿನಲ್ಲಿ ಒಂದು ಅಪೂರ್ವ ಸನ್ನಿವೇಶ ನಿರ್ಮಾಣ ಇರಬೇಕು. ಗೀತ ರಚನಕಾರ ತಾನು ಬರೆದುಕೊಟ್ಟ ಹಾಡಲ್ಲಿ ವಾಗರ್ಥಗಳ ಮೇಳ ಇರಬೇಕಾಗುತ್ತದೆ. 'ಧ್ವನಿ' ಇರಬೇಕಾಗುತ್ತದೆ. ('ದನಿ' ಅಲ್ಲ!) ವ್ಯಂಗ್ಯಾರ್ಥ ಪ್ರಾಪ್ತಿ ಆಗಿರಬೇಕು.

ಉತ್ಕೃಷ್ಟ ಕಲ್ಪನೆ, ಅತ್ಯುತ್ತಮ ಪದಜೋಡಣೆ, ಅಯಾಚಿತ ಧ್ವನ್ಯರ್ಥಗಳು, ಬದುಕಿಗೆ ಹತ್ತಿರವಾದ ಅನುಭವಗಳು, ಅಪರೂಪದ ಅನುಭಾವಗಳು, ಅಭಿವ್ಯಕ್ತಿಯ ಸಮರ್ಥ ಸಾಹಿತ್ಯ ಈ ಎಲ್ಲವೂ ಸಾಕಾರವಾಗಿದ್ದಾಗ ಒಂದು ಸಿನಿಮಾ ಗೀತೆ ಕೂಡ (ಹೊಸದಾಗಿ ಬರೆದದ್ದು) 'ಕಾವ್ಯ' ಆಗುತ್ತದೆ. ಯಾಕಾಗಬಾರದು? ಅದನ್ನು ಕಾವ್ಯ ವಿಮರ್ಶೆಯ ಮಾನದಂಡಗಳಿಂದಲೇ ಅಳೆಯಬೇಕು. ಇದೂ ಕೂಡ 'ಕವಿ ಗೀತೆ' ಪಟ್ಟಿಗೆ ಸೇರಬೇಕು. ಕವಿತೆಯ ವಿಭಾಗಕ್ಕೆ ಅಂಥ ಹಾಡುಗಳನ್ನು ಸೇರಿಸಬೇಕು.

ಮೊದಲು ಕವಿತೆ, ಆನಂತರ ಸ್ವರ ಸಂಯೋಜನೆ, ಮೊದಲು ವ್ಯಕ್ತಿ, ಆನಂತರ ಅವನ ದೇಹದ ಉದ್ದಳತೆಗೆ ತಕ್ಕಂತೆ 'ಅಂಗಿ'. ಇದು ಪರಂಪರೆ.

ಈಗ ಭಾರತೀಯ ಚಿತ್ರರಂಗದಲ್ಲಿ 'ತಿರುವು-ಮುರುವು' ಆಗಿದೆ. ಸಂಗೀತ ನಿರ್ದೇಶಕನಿಗೆ 200